# ಚೆಣ್ಣರ ಫ್ಲೇರ್ ಫ್ರಾಕ್ ಫ್ಯಾಷನ್



**ಜರಿ ಲಂಗ ದಾವಣಿ ತೊಟ್ಟು ಮಿಂಚುತ್ತಿದ್ದ ಪುಟಾಣಿ ಹೆಣ್ಣು ಮಕ್ಕಳು ಇದೀಗ ಫ್ಲೇರ್ ಫ್ರಾಕ್ ಇಷ್ಟಪಡುತ್ತಿವೆ. ಫ್ಲೇರ್ ಫ್ರಾಕ್, ಫ್ರಿಲ್ ಫ್ರಾಕ್, ನಿಟ್ಟೆಡ್ ಫ್ರಾಕ್ ಮಕ್ಕಳ ಫ್ಯಾಷನ್ ಟ್ರೆಂಡ್ ಆಗಿವೆ.**

**★ ಅವನೀಶ್**

ಕೂಸು ಕುಲಾವಿಯೇ ತೊಡಲಿ, ಲಂಗ ದಾವಣಿಯೇ ಉಡಲಿ ನೋಡಲು ಮುದ್ದು ಮುದ್ದಾಗಿರುತ್ತದೆ. ಹೆಣ್ಣು ಮಗು ಅಂತೂ ಇತ್ತೀಚೆಗಿನ ಫ್ಯಾಷನ್ ಟ್ರೆಂಡ್ ಆಗಿರುವ ಫ್ರಿಲ್ ಫ್ರಾಕ್, ಫ್ಲೇರ್ ಫ್ರಾಕ್, ನಿಟ್ಟೆಡ್ ಫ್ರಾಕ್ ಹಾಕಿಕೊಂಡು ಅದಕ್ಕೆ ಮ್ಯಾಚ್ ಆಗುವ ಬಳೆ, ಕ್ಲಿಪ್, ಹ್ಯಾಟ್, ಬೂಟ್ ಹಾಕಿಕೊಂಡರೆ ಅದು ಥೇಟ್ ಬೊಂಬೆಯೇ.

ಮಕ್ಕಳ ಫ್ಯಾಷನ್ ಕೂಡ ಇತ್ತೀಚೆಗೆ ಸಾಕಷ್ಟು ಹೊಸತನದಿಂದ ಕೂಡಿದೆ. ಹೊಸ ಹೊಸ ಫ್ಯಾಷನೆಬಲ್ ಉಡುಪುಗಳು ಮಕ್ಕಳಿಗಾಗಿಯೇ ಬಂದಿವೆ. ಹೀಗಾಗಿ ಮಕ್ಕಳೂ ಕೂಡ ಇಂದು ಫ್ಯಾಷನ್‌ನತ್ತ ವಿಶೇಷ ಒಲವು ತೋರಿಸಲಾರಂಭಿಸಿದ್ದಾರೆ. ತಾಯಂದಿರು ಕೂಡ ತಮ್ಮ ಮಕ್ಕಳು ಅಂದ ಚೆಂದದ ಉಡುಪು ತೊಟ್ಟು ಚೆನ್ನಾಗಿ ಕಾಣಲೆಂದು ಹಂಬಲಿಸುತ್ತಾರೆ.

ಹಾಗೆ ನೋಡಿದರೆ ಮಕ್ಕಳ ಫ್ಯಾಷನ್ ಯಾವಾಗಲೂ ದೊಡ್ಡವರ ಫ್ಯಾಷನ್‌ನ ಪ್ರತಿಬಿಂಬ ಎನ್ನುತ್ತಾರೆ. ಬೇರೆ ಎಲ್ಲದರಂತೆ ಉಡುಪಿನ ವಿಷಯದಲ್ಲೂ ಮಕ್ಕಳು ಹೆತ್ತವರನ್ನೇ ಅನುಸರಿಸುತ್ತವೆ. ಮಕ್ಕಳ ಉಡುಪು ಎಲ್ಲ ತರದ ಉಡುಪು ಫ್ಯಾಷನ್‌ನ ಮಿಶ್ರ ರೂಪವೇ ಎನ್ನಬಹುದು.



ಪುಟಾಣಿಗಳು ಮುಖ್ಯವಾಗಿ ಫ್ರಿಲ್ ಫ್ರಾಕ್ ಇಷ್ಟಪಡುತ್ತಾರೆ. ಇದಕ್ಕೆ ಮ್ಯಾಚಿಂಗ್ ಬೇಕೇ ಬೇಕು. ಫ್ರಾಕ್ ಹಾಕುವಾಗ ಅದಕ್ಕೊಪ್ಪುವ ಬ್ಯಾಂಡ್, ಶೂ, ಬ್ಯಾಗ್, ಕ್ಲಿಪ್, ಬಳೆ, ಹ್ಯಾಟ್, ಚಪ್ಪಲಿ ಅಥವಾ ಬೂಟ್... ಹೀಗೆ ಎಲ್ಲವೂ ಮ್ಯಾಚಿಂಗ್ ಆಗಿದ್ದರೆ ಸಖತ್ ಲುಕ್ ಕೊಡುತ್ತದೆ. ಚಳಿಗಾಲ ಬಂದರೆ ಸ್ವೆಟರ್ ಅನ್ನು ಹೋಲುವ ನಿಟ್ಟೆಡ್ ಐಟಂಗಳು ಜನಪ್ರಿಯವಾಗುತ್ತವೆ. ಸ್ವೆಟರ್, ಸಾಕ್ಸ್, ಮಫ್ಲರ್ ಮುಂತಾದವು ಉಡುಪಿಗೆ ಮ್ಯಾಚಿಂಗ್ ಆಗಿದ್ದರೆ ಚೆನ್ನ. ಇದಕ್ಕಾಗಿ ಮಕ್ಕಳು ಉಡುಪು ಮಳಿಗೆಗಳಲ್ಲಿ ಡ್ರೆಸ್ ಮಾತ್ರವಲ್ಲದೆ ಮ್ಯಾಚಿಂಗ್‌ಗೆ ಬೇಕಾದ ಎಲ್ಲ ಆ್ಯಸೆಸರೀಸ್ ಕೂಡ ಲಭ್ಯವಿರುತ್ತವೆ.

ಡೆನಿಮ್ ಉಡುಪು ಸಹ ಮಕ್ಕಳಿಗೆ ಸೂಕ್ತವಾದವು. ಜೀನ್ಸ್ ಅಂತೂ ಎಲ್ಲ ಕಾಲಕ್ಕೂ ಹುಡುಗ– ಹುಡುಗಿ ಎಂಬ ಭೇದವಿಲ್ಲದೆ ಎಲ್ಲರಿಗೂ ಸರಿ ಹೊಂದುವಂಥವು. ಇದು ಫ್ಯಾಷನ್ ಟ್ರೆಂಡ್ ಕೂಡ ಆಗಿದೆ. ಜೀನ್ಸ್ ಮೇಲೆ ಲೇಸ್, ಕ್ರಿಸ್ಟಲ್ಸ್, ಸ್ಟಡ್ಸ್, ಫ್ರಿಂಜ್ ಮುಂತಾದವನ್ನು ಹಾಕಿ ಮಾಡಿದ ಟಾಪ್ ಹಾಕಿದರಂತೂ ಅದು ಮಗುವಿನ ಸೌಂದರ್ಯವನ್ನು ಇಮ್ಮಡಿಸುತ್ತದೆ.

## ವರ್ಣ ವೈವಿಧ್ಯ

ಮಕ್ಕಳ ಫ್ಯಾಷನ್‌ನಲ್ಲಿ ಬಣ್ಣಗಳಿಗೆ ಬಹಳ ಮಹತ್ವ. ಕೆಂಪು, ಹಸುರು, ನೀಲಿ, ಪಿಂಕ್, ಹಳದಿ, ನೇರಳೆ ಬಣ್ಣಗಳ ಜತೆಗೆ ಕಂದು, ಸ್ಟೀಲ್, ಬೂದು, ಕಪ್ಪು–ಬಿಳುಪು ಉಡುಪು ಈಗ ಹಲವು ವೈವಿಧ್ಯಗಳಲ್ಲಿ ಬಂದಿದೆ. ಕೆಂಪು, ಕೋರಲ್, ಕಿತ್ತಳೆ, ನೇರಳೆ ಬಣ್ಣಗಳಲ್ಲಿ ಬರುವ ಎಲ್ಲ ಶೇಡ್‌ಗಳ ಬಟ್ಟೆಗಳೂ ಮಕ್ಕಳಿಗೆ ತುಂಬ ಚೆನ್ನಾಗಿ ಕಾಣುತ್ತವೆ.

ಜೀನ್ಸ್ ಪ್ಯಾಂಟ್ ಅಥವಾ ಹಾಫ್ ಪ್ಯಾಂಟ್ ಹಾಕುವುದಾದರೆ ಇದಕ್ಕೆ ಈ ಎಲ್ಲ ಬಣ್ಣಗಳ ಪ್ರಿಂಟೆಡ್ ಟಾಪ್‌ಗಳು ಚೆನ್ನಾಗಿ ಸೂಕ್ತವಾಗುತ್ತವೆ. ಬೋಲ್ಡ್ ಪ್ರಿಂಟ್ಸ್ ಕೂಡ ಮಕ್ಕಳ ಫ್ಯಾಷನ್ ಆಗಿದೆ. ಇದರ ಜತೆಗೆ ಸ್ಟೇಟ್‌ಮೆಂಟ್ ಪ್ರಿಂಟ್ಸ್, ಎಂಬ್ರಾಯಿಡರಿ ಉಡುಗೆ , ಸ್ಟ್ರೈಪ್ಸ್ ಮತ್ತು ಪೋಲ್ಕಾ ಡಾಟ್ಸ್ ಮಕ್ಕಳನ್ನು ಇನ್ನೂ ಮುದ್ದಾಗಿ ಕಾಣಿಸುತ್ತವೆ. ಇದರ ಬೆಲೆ ಅಂದಾಜು 400 ರೂಪಾಯಿಗಳಿಂದ ಮೂರು ಸಾವಿರ ರೂಪಾಯಿಗಳವರೆಗೂ ಇರುತ್ತದೆ.

ಹಿಂದೆ ಜರಿಲಂಗ ದಾವಣಿ ಹಾಕಿಕೊಂಡು ಗೆಜ್ಜೆ ಕಾಲಿನ ಪೋರಿ ಬಂದಳೆಂದರೆ ಅದೇ ದೊಡ್ಡ ಫ್ಯಾಷನ್. ಆದರೆ ಈಗ ಮಕ್ಕಳೂ ದೊಡ್ಡವರಂತೆ ಎಲಿಗೆಂಟ್ ಲುಕ್ ಕೊಡುವ ಫ್ಯಾಷನ್ ಅನ್ನು ಇಷ್ಟಪಡುತ್ತಾರೆ.

ತಮ್ಮ ಮಗು ಹತ್ತು ಮಕ್ಕಳಲ್ಲಿ ಎದ್ದು ಕಾಣಬೇಕು, ಫ್ಯಾಷನೆಬಲ್ ಆಗಿರಬೇಕು ಎಂಬ ಹಂಬಲ ತಾಯಂದಿರದ್ದು. ಪುಟಾಣಿ ಹೆಣ್ಣು ಮಕ್ಕಳು ಲಂಗ ದಾವಣಿ ತೊಟ್ಟು ಮಿಂಚುತ್ತಿದ್ದ ಕಾಲ ಕ್ರಮೇಣ ತೆರೆಮರೆಗೆ ಸರಿಯುತ್ತಿದೆ. ಇದೀಗ ಫ್ಲೇರ್ ಫ್ರಾಕ್, ಫ್ರಿಲ್ ಫ್ರಾಕ್, ನಿಟ್ಟೆಡ್ ಫ್ರಾಕ್ ಮಕ್ಕಳ ಫ್ಯಾಷನ್ ಟ್ರೆಂಡ್ ಆಗಿವೆ. ಹುಟ್ಟುಹಬ್ಬ, ಮದುವೆ, ಮುಂಜಿ ಮುಂತಾದ ಶುಭ ಸಮಾರಂಭಗಳಿಗಂತೂ ಈ ಉಡುಪು ಅತ್ಯಂತ ಸೂಕ್ತವಾದವು ಕೂಡ ಆಗಿದೆ. ■